ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಹಾಗೂ ಎಫ್.ಟಿ.ಎಸ್.ಸಿ-**1,** ಹಾವೇರಿ
ಎಸ್.ಸಿ.**18/2020**

PW- 14
CW-19

| | |
|---|---|
| ಸಾಕ್ಷಿದಾರರ ಹೆಸರುಃ | ಪ್ರಕಾಶ ವೇರಣೆಕರ |
| ತಂದೆಯ ಹೆಸರುಃ | ಶಾಂತಾರಾಮ |
| ವಯಸ್ಸುಃ | 58 ವರ್ಷ |
| ಉದ್ಯೋಗಃ | ಅಕ್ಕಸಾಲಿಗರು |
| ಹಾಲಿ ವಾಸ ಸ್ಥಳಃ | ಹೊಸ ಬಸ್ಸ ನಿಲ್ದಾಣ , ಶಿಗ್ಗಾಂವ |

ದಿನಾಂಕ**: 21.12.2024** ರಂದು ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ

ಶಿಗ್ಗಾಂವ ಪಟ್ಟಣದ ಬಾಜಾರ್ ರಸ್ತೆಯಲ್ಲಿ ನಮಗೆ ಸೇರಿದ ಒಂದು ಮನೆ ಇರುತ್ತದೆ. ಕಳೆದ 15 ವರ್ಷಗಳ ಹಿಂದೆ ಸದರಿ ಮನೆಯಲ್ಲಿ ನಾವು ವಾಸವಾಗಿದ್ದೆವು. ನಂತರ ನಾವು ಸದರಿ ಮನೆಯನ್ನು ಬಾಡಿಗೆ ನಾತೆಯಿಂದ ಬೇರೆಯವರಿಗೆ ಅನುಭೋಗಕ್ಕೆ ಕೊಟ್ಟಿದ್ದೆವು. ಮೃತ ಶಾಂತಾಬಾಯಿ ಗೊತ್ತು. ಸದರಿಯವಳ ಗಂಡ ಅವಳಿಗಿಂತ ಮುಂಚೆಯೇ ತೀರಿಕೊಂಡಿರುತ್ತಾನೆ. ಸದರಿ ಮನೆ ನಮ್ಮ ಹಳೆಯ ಮನೆಯ ಪಕ್ಕದಲ್ಲಿ ಇತ್ತು. ಸದರಿಯವಳಿಗೆ ಚಾಸಾ-8 ರಿಂದ 12 ಮೃತ ಶಾಂತಾಬಾಯಿಯವರ ಮಕ್ಕಳು. ಚಾಸಾ-8 ರಿಂದ 11 ರವರು ತಮ್ಮ ತಮ್ಮ ಕುಟುಂಬದವರೊಂದಿಗೆ ಬೇರೆ ಬೇರೆಯಾಗಿ ವಾಸವಾಗಿದ್ದರು. ಚಾಸಾ-12 ಮದುವೆಯಾಗಿ ಶಿಕಾರಿಪುರದ ಗಂಡನ ಮನೆಯಲ್ಲಿ ಇರುತ್ತಾಳೆ.

ಮೃತ ಶಾಂತಾಬಾಯಿ ಈಗ್ಗೆ 5 – 6 ವರ್ಷಗಳ ಹಿಂದೆ ತೀರಿಕೊಂಡಿರುತ್ತಾಳೆ. ನಾನು ಸದರಿಯವರು ತೀರಿಕೊಂಡಾಗ ಅವಳ ಮನೆಗೆ ಹೋಗಿರಲಿಲ್ಲ. ಮೃತ ಶಾಂತಾಬಾಯಿ ಯಾಕೆ, ಹೇಗೆ , ಎಲ್ಲಿ ಹಾಗೂ ಯಾವ ಕಾರಣದಿಂದ ತೀರಿಕೊಂಡಳು ಎಂಬುದು ನನಗೆ ಗೊತ್ತಿಲ್ಲ. ಮೃತ ಶಾಂತಾಬಾಯಿ ಸಾವಿನ ಕುರಿತು ಪೋಲಿಸರು ನನ್ನನ್ನು ವಿಚಾರಿಸಿಲ್ಲ ಹಾಗೂ ನಾನು ಯಾವುದೇ ಹೇಳಿಕೆ ನೀಡಿಲ್ಲ. ಮೃತಳ ಸಾವಿಗೆ ಯಾರು ಕಾರಣರು ಎಂಬುದು ಗೊತ್ತಿಲ್ಲ. ಆರೋಪಿಯನ್ನು ನಾನು ನೋಡಿಲ್ಲ. ಆತನ ಬಗ್ಗೆ ನನಗೆ ಗೊತ್ತಿಲ್ಲ. ಪ್ರಕರಣದ ಕುರಿತು ಹೆಚ್ಚಿನ ಮಾಹಿತಿ ಇಲ್ಲ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷಿಯ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ)

ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ಮೃತ ಶಾಂತಾಬಾಯಿ ಸಾವಿನ ಮುನ್ನ ನಮ್ಮ ಹಳೆಯ ಮನೆಯ ಪಕ್ಕದಲ್ಲಿ ವಾಸವಾಗಿದ್ದಳು ಎಂದರೆ ನನಗೆ ಗೊತ್ತಿಲ್ಲ. ತಾಃ 17.08.2019 ರಂದು ಶಾಂತಾಬಾಯಿಯ ಕೊಲೆಯಾದ ವಿಷಯ ನನಗೆ ಗೊತ್ತಾಗಿ ನಾನು ಅವಳ ಮನೆಗೆ ಅವಳನ್ನು ನೋಡಲು ಹೋಗಿದ್ದೆ ಎಂದರೆ ಸರಿಯಲ್ಲ. ಆಗ ನಾನು ಶಾಂತಾಬಾಯಿ ತನ್ನ ಮನೆಯ ನಡುಮನೆಯಲ್ಲಿ ಮಂಚದ ಮೇಲೆ ಅಂಗಾತ ಮಲಗಿದ್ದು , ಅವಳ ಕೈಗಳನ್ನು ಸೀರೆಯಿಂದ ಮಂಚಕ್ಕೆ ಕಟ್ಟಿ , ಕುತ್ತಿಗೆಯನ್ನು ಸಹ ಸೀರೆಯಿಂದ ಬಿಗಿದು ಅದೇ ಸೀರೆಯಿಂದ ಕಣ್ಣುಗಳನ್ನು ಸಹ ಕಟ್ಟಲಾಗಿತ್ತು ಎಂದರೆ ಗೊತ್ತಿಲ್ಲ. ಶಾಂತಾಂಬಾಯಿ ಬಾಯಲ್ಲಿ ರಕ್ತ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ಎಡಗಲ್ಲದ ಮೇಲೆ ಗಾಯಗಳಾಗಿದ್ದವು ಎಂದರೆ ನನಗೆ ಗೊತ್ತಿಲ್ಲ. ಶಾಂತಾಬಾಯಿ ಮಂಚದ ಪಕ್ಕದಲ್ಲಿ ರಕ್ತಹತ್ತಿದ ತಲೆದಿಂಬು ಇತ್ತು ಎಂದರೆ ನನಗೆ ಗೊತ್ತಿಲ್ಲ. ಅವಳು ಧರಿಸಿದ್ದ ಸೀರೆ ಲಂಗ ಅಸ್ತವ್ಯಸ್ತವಾಗಿದ್ದವು ಎಂದರೆ ಗೊತ್ತಿಲ್ಲ. ನಾನು ಹೋಗಿ ನೋಡಿದಾಗ ಶಾಂತಾಬಾಯಿ ಸಂಬಂಧಿಕರು ಬಂದಿದ್ದರು ಎಂದರೆ ನನಗೆ ಗೊತ್ತಿಲ್ಲ. ಶಾಂತಾಬಾಯಿಯನ್ನು ಮುಖಕ್ಕೆ ತಲೆದಿಂಬು ಒತ್ತಿ , ಉಸಿರುಗಟ್ಟಿಸಿ ಕೊಲೆ ಮಾಡಿ ಅವಳ ಮೈ ಮೇಲಿನ ಬಂಗಾರದ ಕೈ ಬಳೆಗಳನ್ನು , ಸರವನ್ನು ಕದ್ದೊಯ್ಯಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಮಂಚದ ಬಳಿ ಬಳೆಗಳು ಸಹ ಒಡೆದು ಚಲ್ಲಾಪಿಲ್ಲಿಯಾಗಿದ್ದವು ಎಂದರೆ ನನಗೆ ಗೊತ್ತಿಲ್ಲ. ಚಾಸಾ-1 ರವರು ಈ ಬಗ್ಗೆ ದೂರು ಸಲ್ಲಿಸಿರುವುದು ನನಗೆ ಗೊತ್ತಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಂತರ

ತಾಃ 06.09.2019 ರಂದು ನಾನು ಈಗ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಠಾಣೆಯಲ್ಲಿ ನೋಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ತನ್ನ ಹೆಂಡತಿ ಜೊತೆ ಸೇರಿ ಮೃತ ಶಾಂತಾಬಾಯಿ ಮನೆಯ ಮೇಲಿನ ಅಟ್ಟದ ಕೋಣೆಯನ್ನು ಬಾಡಿಗೆ ಕೇಳುವ ನೆಪ ಮಾಡಿಕೊಂಡು ಆಗಾಗ ಹೋಗಿ ಬಂದು ಮಾಡುತ್ತಾ ಬಂದು , ತಾಃ 16.08.2019 ರಂದು ರಾತ್ರಿ 11.30 ರ ಸುಮಾರಿಗೆ ಆರೋಪಿಯು ತನ್ನ ಹೆಂಡತಿಯೊಂದಿಗೆ ಮೃತ ಶಾಂತಾಬಾಯಿ ಮನೆಗೆ ಬಂದು ಅವಳ ಮೈಮೇಲಿನ ಆಭರಣಗಳನ್ನು ಕಿತ್ತುಕೊಳ್ಳಲು ಪ್ರಯತ್ನ ಮಾಡಿ ಅವಳು ಕೊಡದೇ ಇದ್ದಾಗ ಆರೋಪಿ ಮತ್ತು ಆತನ ಹೆಂಡತಿ ಸೇರಿ ಮೃತ ಶಾಂತಾಬಾಯ ಕೈಗಳನ್ನು ಮಂಚಕ್ಕೆ ಕಟ್ಟಿ , ಕಣ್ಣಿಗೆ ಕೈಗೆ ಅದೇ ಸೀರೆಯಿಂದ ಕಟ್ಟಿ , ತಲೆದಿಂಬಿದಿಂದ ಅವಳ ಮುಖಕ್ಕೆ ಒತ್ತಿ ಉಸಿರುಗಟ್ಟಿಸಿ ಈಗ ತೋರಿಸಿದ ನಿಪಿ-12 ರಿಂದ 14 ರಲ್ಲಿ ಕಂಡು ಬರುವ ಬಂಗಾರ ಬಳೆ ಮತ್ತು ಸರವನ್ನು ಕದ್ದೊಯ್ದರು ಎಂದರೆ ಸರಿಯಲ್ಲ. ಆರೋಪಿತರು ಸದರಿ ಆಬರಣಗಳನ್ನು ಮನೆಯಲ್ಲಿಟ್ಟು ತಮ್ಮ ಮಕ್ಕಳನ್ನು ಮುಂಚಿತವಾಗಿ ಹುಬ್ಬಳ್ಳಿಗೆ ಕಳುಹಿಸಿ ತಾನು ಸಹ ಹುಬ್ಬಳ್ಳಿಗೆ ಹೋಗಿ ಮಕ್ಕಳಿಗೆ ವಿಷಯ ಹೇಳಿ ಸದರಿ ಕೃತ್ಯದಿಂದ ಭಯಗೊಂಡು ಇಬ್ಬರು ವಿಷ ಸೇವಿಸಿ ಸಾಯಲು ಪ್ರಯತ್ನ ಮಾಡಿ, ಆ ಪೈಕಿ ಆರೋಪಿಯ ಹೆಂಡತಿ ಹುಬ್ಬಳ್ಳಿಯ ಕೀಮ್ಸ್ ಆಸ್ಪತ್ರೆಯಲ್ಲಿ ಮೃತ ಪಟ್ಟಿರುತ್ತಾಳೆ ಎಂದು ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ತಾಃ 18.08.2019 ರಂದು ಹೇಳಿಕೆ ಮತ್ತು ತಾಃ 06.09.2019 ರಂದು ಮರುಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆ ಮತ್ತು ಮರುಹೇಳಿಕೆಯನ್ನು ನಿಪಿ-15, 16 ಎಂದು ಗುರುತಿಸಲಾಯ್ತು. ಆರೋಪಿಗೆ ಸಹಾಯ ಮಾಡಲು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ

ಏನು ಇಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ಎಫ್.ಟಿ.ಎಸ್.ಸಿ-1
ಹಾವೇರಿ.